**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,**
**ನಂಜನಗೂಡು**

**<u>ಸಿ.ಸಿ.ಸಂಖ್ಯೆಃ 1357/2015</u>**

**ಪಿರ್ಯಾದಿ :** ಸರ್ಕಾರದ ಪರಃ ಬದನವಾಳು ಪೊಲೀಸರು

**ವಿರುದ್ಧ**

**ಆರೋಪಿತರು :**
1. ಚಿನ್ನೇಗೌಡ, ಬಿನ್ ಲೇ. ಮಾದೇಗೌಡ ಉ.ನಾಲೇಗೌಡ, 50 ವರ್ಷ,
2. ಭಾಗ್ಯಮ್ಮ, ಕೋಂ. ಚಿನ್ನೇಗೌಡ, 40 ವರ್ಷ,
3. ಪುಷ್ಪಲತ, ಬಿನ್ ಚಿನ್ನೇಗೌಡ, 20 ವರ್ಷ,
4. ಮಣಿಕುಮಾರ್ ಉ. ಮಣಿ, ಬಿನ್ ಚಿನ್ನೇಗೌಡ, 23 ವರ್ಷ,

ವಾಸಃ ಹನಿಯಂಬಳ್ಳಿ ಗ್ರಾಮ, ನಂಜನಗೂಡು ತಾಲ್ಲೂಕು,

**<u>ದೋಷಾರೋಪಣೆ</u>**

*ಶ್ರೀ ಕಿಶೋರ್ ಕುಮಾರ್ ಎಂ., 1ನೇ ಹೆಚ್ಚುವರಿ* ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಬಿ.ಎ. ಎಲ್‌ಎಲ್.ಬಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:-

ದಿನಾಂಕಃ **16.06.2015** ರಂದು ಬೆಳಗ್ಗೆ **7.00** ಗಂಟೆ ಸಮಯದಲ್ಲಿ ಬದನವಾಳು ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಹನಿಯಂಬಳ್ಳಿ ಗ್ರಾಮದ **1** ನೇ ಆರೋಪಿಯ ವಾಸದ ಮನೆಯ ಪಕ್ಕದ ಖಾಲಿ ಜಾಗದಲ್ಲಿ **1** ನೇ ಆರೋಪಿಯು ಕೊಳಚೆ ನೀರು ಹೋಗಲು ಜಾಗ ಮಾಡುತ್ತಿದ್ದು, ಚಾಸಾ-**1** ರವರು ಈ ಜಾಗದ ಬಗ್ಗೆ ನ್ಯಾಯಾಲಯದಲ್ಲಿ ಕೇಸು ಇರುತ್ತದೆ ಕೇಳು ಮುಗಿಯುವವರೆಗೆ ಈ ಜಾಗದ ಕಡೆ ನೀರು ಬಿಡಬೇಡ ಎಂದು ಹೇಳಲು ಹೋದಾಗ, ಆರೋಪಿತರುಗಳು ಅಪರಾಧವನ್ನು ಎಸಗುವ ಸಮಾನ ಉದ್ದೇಶಹೊಂದಿ, ಆ ಪೈಕಿ **1** ನೇ ಆರೋಪಿಯು ಚಾಸಾ-**1** ರವರನ್ನು ತಡೆದುಕೊಂಡು ಅಕ್ರಮ ತಡೆಯನ್ನುಂಟುಮಾಡಿದ ಕಾರಣ, ಭಾರತ ದಂಡ ಸಂಹಿತೆಯ ಕಲಂ **341** ಸಹವಾಚಕ ಕಲಂ **34** ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಎರಡನೇಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರುಗಳು ಅಪರಾಧವನ್ನು ಎಸಗುವ ಸಮಾನ ಉದ್ದೇಶಹೊಂದಿ, ಆ ಪೈಕಿ **2** ರಿಂದ **4** ನೇ ಆರೋಪಿತರಾದ ನೀವು ಚಾಸಾ-**1** ಮತ್ತು **2** ರವರಿಗೆ ಕೈಯಿಂದ ಮೈಕೈಗೆ ಹೊಡೆದು ಮತ್ತು **2** ಮತ್ತು **3** ನೇ ಆರೋಪಿತರಾದ ನೀವು ಚಾಸಾ-**2** ರವರಿಗೆ ಕಾಲಿನಿಂದ ತುಳಿದು ಸ್ವಯಂ ಪ್ರೇರಿತವಾಗಿ ಸಾಮಾನ್ಯ ಸ್ವರೂಪದ ನೋವುಂಟುಮಾಡಿದ ಕಾರಣ, ಭಾರತ ದಂಡ

ಸಂಹಿತೆಯ ಕಲಂ 323 ಸಹವಾಚಕ ಕಲಂ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೂರನೆಯದಾಗಿ, ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರುಗಳು ಅಪರಾಧವನ್ನು ಎಸಗುವ ಸಮಾನ ಉದ್ದೇಶಹೊಂದಿ, ಆ ಪೈಕಿ 4 ನೇ ಆರೋಪಿಯಾದ ನೀವು, ಚಾಸಾ-1 ಮತ್ತು 2 ರವರಿಗೆ ಬೋಳಿ ಮಕ್ಕಳೇ, ಸೂಳೆ ಮಕ್ಕಳೇ, ಬಡ್ಡಿ ಮಕ್ಕಳೇ ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನಮಾಡಿ ಶಾಂತಿಯನ್ನು ಭಂಗಮಾಡಿದ ಕಾರಣ, ಭಾರತ ದಂಡ ಸಂಹಿತೆಯ ಕಲಂ 504 ಸಹವಾಚಕ ಕಲಂ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಕೊನೆಯದಾಗಿ ಅದೇ ದಿನ, ಅದೇ ವೇಳೆ ಮತ್ತು ಅದೇ ಸ್ಥಳದಲ್ಲಿ, ಆರೋಪಿತರುಗಳು ಅಪರಾಧವನ್ನು ಎಸಗುವ ಸಮಾನ ಉದ್ದೇಶಹೊಂದಿ, ಆ ಪೈಕಿ 1 ಮತ್ತು 4 ನೇ ಆರೋಪಿತರುಗಳಾದ ನೀವು ಚಾಸಾ-1 ರವರಿಗೆ ಜಾಗದ ವಿಷಯಕ್ಕೇನಾದರೂ ಬಂದರೆ ಕೊಲೆ ಮಾಡದೆ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪದನೆಯನ್ನು ಉಂಟು ಮಾಡಿದ ಕಾರಣ, ಭಾರತ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರಡಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

(ಮೇಲ್ಕಂಡ ಆರೋಪವನ್ನು ಆರೋಪಿಗೆ ಓದಿ ಹೇಳಿ ಕೇಳಲಾಯಿತು. ಆರೋಪಿ ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 03.10.2022 ರಂದು ತೆಗೆದ ನ್ಯಾಯಾಲಯದಲ್ಲಿ ದೃಢೀಕರಿಸಿರುತ್ತೇನೆ.)

1 ನೇ ಹೆ.ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು

**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,**
**ನಂಜನಗೂಡು**

**ಸಿ.ಸಿ.ಸಂಖ್ಯೆ: 1357/2015**

**ಪಿರ್ಯಾದಿ** : ಸರ್ಕಾರದ ಪರಃ ಬದನವಾಳು ಪೊಲೀಸರು

**ವಿರುದ್ಧ**

**ಆರೋಪಿತರು** :
1. ಚಿನ್ನೇಗೌಡ, ಬಿನ್ ಲೇ. ಮಾದೇಗೌಡ ಉ.ನಾಲೇಗೌಡ, 50 ವರ್ಷ,
2. ಭಾಗ್ಯಮ್ಮ, ಕೋಂ. ಚಿನ್ನೇಗೌಡ, 40 ವರ್ಷ,
3. ಪುಷ್ಪಲತ, ಬಿನ್ ಚಿನ್ನೇಗೌಡ, 20 ವರ್ಷ,
4. ಮಣಿಕುಮಾರ್ ಉ. ಮಣಿ, ಬಿನ್ ಚಿನ್ನೇಗೌಡ, 23 ವರ್ಷ,

ವಾಸಃ ಹನಿಯಂಬಳ್ಳಿ ಗ್ರಾಮ, ನಂಜನಗೂಡು ತಾಲ್ಲೂಕು,

**ಃ ಆಪಾದನೆ ಃ**

ಪ್ರಶ್ನೆ1 ಃ ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ ?
ಉತ್ತರ ಃ

ಪ್ರಶ್ನೆ2 ಃ ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕೋ?
ಉತ್ತರ ಃ

(ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸಲಾಗಿದೆ)

ದಿನಾಂಕಃ

1 ನೇ ಹೆ.ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು